# KARNATAKA LOKAYUKTA

No:UPLOK-1/DE/127/2019 /ARE-9

M.S.Building,
Dr.B.R.Ambedkar Veedhi,
Bengaluru-560001.
Date:22.11.2023

24

## ENQUIRY REPORT

**:PRESENT:**

**(SHUBHAVEER.B.)**
Additional Register of Enquiries-9,
Karnataka Lokayukta, Bengaluru.

**Sub**: Departmental enquiry against Sri.Aravind R Kulakarni, the then Executive Engineer (Retired), Panchayath Raj Engineering Division, Haveri -reg.

**Ref**: 1) G.O.No. Lo E 7 Se EV 2019, dated 23-4-2019.

2) Nomination order No.UPLOK-1/DE/127/2019, Bengaluru, dated: 13.5.2019, of Hon'ble Upalokayukta-1, Bengaluru.

* * *

This departmental enquiry is initiated against Sri.Aravind R Kulakarni, the then Executive Engineer (Retired), Panchayath Raj Engineering Division, Haveri (hereinafter referred to as Delinquent Government Official, for short, DGO).

2. In pursuance of the Government Order cited above at reference No. 1, Hon'ble Upalokayukta, vide-order, dated 13.5.2019, cited above at reference No.2, has nominated Additional Registrar of Enquiries-9 (for short,

ARE-9) to frame the charges and to conduct enquiry against the aforesaid DGO.

3. The ARE-9 issued the Articles of Charge to the DGO, enclosing the statement of imputations of misconduct, list of witnesses proposed to be examined and list of documents proposed to be relied, in support of charges and called him to appear before ARE-9.

4. The Articles of Charge issued by ARE-9 against the DGO is as shown infra:

## ANNEXURE-1
## CHARGE

ಆಸನಾ ಆದ ನೀವು – ಹಾವೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರರಾಗಿ ನಿವೃತ್ತಿ ಹೊಂದಿದ್ದು,

ಹುಬ್ಬಳ್ಳಿಯ ಗೋಕುಲ ರಸ್ತೆ ಅಶೋಕವನ ಬಡಾವಣೆಯ ಪ್ಲಾಟ್ ನಂ.33 (1973 ಚದರಡಿ) ಅಳತೆಯ ನಿವೇಶನ ಮತ್ತು ಅದರಲ್ಲಿ 2 ಅಂತಸ್ತಿನ ಮನೆ ನಿಮ್ಮ ಹೆಸರಿನಲ್ಲಿದ್ದು, ಸದರಿ ಸ್ವತ್ತನ್ನು ಒಟ್ಟು ರೂ.7,20,000/–ಗಳಿಗೆ ಖರೀದಿಸಲು ನಿಮ್ಮ ಮೇಲಾಧಿಕಾರಿಗಳ ಅನುಮತಿ ಕೋರಿದ್ದು, ಸ್ವತ್ತನ್ನು ಖರೀದಿಸಲು ದಿನಾಂಕ:01/12/01ರಂದು ನೀವು ಅನುಮತಿ ಪಡೆದಿರುತ್ತೀರಿ. ವೇತನ ಉಳಿತಾಯದಿಂದ ರೂ.1,70,000/–, ಕೃಷಿ ಮೂಲದಿಂದ ರೂ.50,000/– ಮತ್ತು ಹೆಚ್‌ಡಿಎಫ್‌ಸಿ ಬ್ಯಾಂಕ್‌ನಿಂದ ರೂ.5,00,000/– ಸಾಲ ಎಂದು ಹಣದ ಮೂಲವನ್ನು ನೀವು ನಿಮ್ಮ ಇಲಾಖಾ ಮೇಲಾಧಿಕಾರಿಗಳಿಗೆ ತೋರಿಸಿದ್ದೀರಿ. ದಿ:01/12/01ರ ಆದೇಶ ಮತ್ತು ದಿ:01/12/2000ರ ಕ್ರಯ ಪತ್ರದ ಪ್ರತಿಯಿರುತ್ತದೆ. ಸ್ಥಿರ ಸ್ವತ್ತನ್ನು ದಿ:01/12/2000 ದಂದು ರೂ.7,20,000/–ಗಳಿಗೆ ಖರೀದಿಸಿದ ನಂತರ ನೀವು ದಿ:01/12/01ರಂತೆ ಇಲಾಖಾ ಅನುಮತಿಯನ್ನು ಪಡೆದಿರುವುದು

ಕಂಡು ಬಂದಿದೆ. ಕೆಸಿಎಸ್ (ನಡತೆ) ನಿಯಮಗಳು, 1956ರ ನಿಯಮ 23ರ ಪ್ರಕಾರ ಯಾವುದೇ ಒಬ್ಬ ಸರ್ಕಾರಿ ನೌಕರ ಸ್ಥಿರ ಸ್ವತ್ತನ್ನು ಖರೀದಿಸುವ ಮುನ್ನ ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಪಡೆಯಬೇಕಿದೆ. ನೀವು ಆ ರೀತಿಯ ಪೂರ್ವಾನುಮತಿಯನ್ನು ಪಡೆಯದೇ ಸ್ಥಿರ ಸ್ವತ್ತನ್ನು ರೂ.7,20,000/–ಗಳಿಗೆ ಖರೀದಿಸಿ ಕೆಸಿಎಸ್ (ನಡತೆ) ನಿಯಮ 23(2)ರ ಉಲ್ಲಂಘನೆ ಮಾಡಿ ದುರ್ನಡತೆ ತೋರಿಸಿರುತ್ತೀರಿ.

ನೀವು ದಿ:10/07/15ರಂದು ಎಸ್‌ಬಿಹೆಚ್, ಹುಬ್ಬಳ್ಳಿಯಿಂದ ರೂ.10,00,000/– ಗೃಹ ಸಾಲವನ್ನು ಪಡೆದಿದ್ದು ಪೂರ್ವಾನುಮತಿಯನ್ನು ಪಡೆದ ಬಗ್ಗೆ ದಾಖಲೆಗಳಿಲ್ಲ. ಆದ್ದರಿಂದ, ಅಸನೌ ರವರು ಕೆಸಿಎಸ್ (ನಡತೆ) ನಿಯಮಗಳು, 1956ರ ನಿಯಮ 23(3)&(4) ಅನ್ನು ಉಲ್ಲಂಘಿಸಿದ್ದೀರಿ;

ಹುಬ್ಬಳ್ಳಿಯ ಏರ್‌ಪೋರ್ಟ್ ರಸ್ತೆಯಲ್ಲಿ ನಿಮ್ಮ ಪತ್ನಿ ಶ್ರೀಮತಿ.ಗೀತಾ ಕುಲಕರ್ಣಿ ರವರ ಹೆಸರಿನಲ್ಲಿ 33x50 ಅಳತೆಯ ವಿಸ್ತೀರ್ಣದ ನಿವೇಶನವಿದೆ. ಪರಿಹಾರ ಧನ + ಸಂಬಳದ ಉಳಿತಾಯದಿಂದ ಸದರಿ ಸ್ವತ್ತನ್ನು ಅರ್ಜಿಸಿದೆಯೆಂದು ನೀವು ಆಸ್ತಿ ಧಾಯಿತ್ವ ಪಟ್ಟಿಯಲ್ಲಿ ಘೋಷಿಸಿಕೊಂಡಿದ್ದು, ನಿಮ್ಮ ಪತ್ನಿ ಗೃಹಿಣಿಯಾಗಿದ್ದು, ಆದಕಾರಣ, ಸ್ವತ್ತನ್ನು ನೀವು ವೇತನ ಉಳಿತಾಯದ ಹಣದಿಂದ ಮತ್ತು ನೀವು ಹೇಳಿದಂತೆ ಪರಿಹಾರ ಧನದಿಂದ ಖರೀದಿಸಿದೆಯೆಂದು ಹೇಳಬಹುದಾಗಿದೆ. ನಿಮ್ಮ ಪತ್ನಿಯ ಹೆಸರಿನಲ್ಲಿ ರೂ.11,50,000/– ಗಳಿಗೆ ನಿವೇಶನವನ್ನು ಖರೀದಿಸುವ ಬಗ್ಗೆ ನೀವು ನಿಮ್ಮ ಇಲಾಖಾ ಮೇಲಾಧಿಕಾರಿಗಳಿಂದ ಅಥವಾ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿರುವುದಿಲ್ಲ. ನೀವು ಪೂರ್ವಾನುಮತಿಯನ್ನು ಪಡೆಯದೆ ಸ್ಥಿರ ಸ್ವತ್ತನ್ನು ರೂ.11,50,000/–ಗಳಿಗೆ ಖರೀದಿಸಿ ಕೆಸಿಎಸ್ (ನಡತೆ) ನಿಯಮ 23(2)ರ ಉಲ್ಲಂಘನೆ ಮಾಡಿ ದುರ್ನಡತೆ ತೋರಿಸಿರುತ್ತೀರಿ;

ಅಲ್ಲದೇ, ಹೊಂಡಾ ಕಂಪನಿಯ ಕೆಎ 03 ಎಂಡಿ 6291 ನೋಂದಣಿ ಸಂಖ್ಯೆಯ ಕಾರ್ ನಿಮ್ಮ ಹೆಸರಿನಲ್ಲಿ ದಿ:02/04/05ರಂದು ನೋಂದಣಿಯಾಗಿದ್ದು,

ಆ ಬಗ್ಗೆ ಬಿ-ವಹಿಯ ಪ್ರತಿಯಲ್ಲಿ ಕಂಡು ಬಂದಿದೆ. ಸದರಿ ಕಾರ್ ಆರ್‌ಟಿಒ, ಬೆಂಗಳೂರು ಪೂರ್ವ ರವರ ಕಛೇರಿಯಲ್ಲಿ ನೋಂದಣಿಯಾಗಿದೆ. ಸದರಿ ಕಾರನ್ನು ಜೀವ ವಿಮಾ ಫಲಿತ ಮೊತ್ತ ಮತ್ತು ಬ್ಯಾಂಕ್ ಸಾಲದಿಂದ ಖರೀದಿಸಿದೆಯೆಂದು ನೀವು ಆಸ್ತಿ ಧಾಯಿತ್ವ ಪತ್ರದಲ್ಲಿ ಘೋಷಿಸಿದ್ದು ಆದರೆ, ಬ್ಯಾಂಕ್ ಸಾಲ ಎಷ್ಟು? ಮತ್ತು ಜೀವ ವಿಮಾ ಫಲಿತ ಮೊತ್ತ ಎಷ್ಟೆಂದು ಎಲ್ಲಿಯೂ ಘೋಷಿಸಿಲ್ಲ. ವಾಹನ ಖರೀದಿಯ ಬಗ್ಗೆ ನೀವು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆಯದೆ ಖರೀದಿಸಿ ಕೆಸಿಎಸ್ (ನಡತೆ) ನಿಯಮ 23(3)ರ ಉಲ್ಲಂಘನೆ ಮಾಡಿ ದುರ್ನಡತೆ ತೋರಿಸಿರುತ್ತೀರಿ;

ಆದ್ದರಿಂದ, ನೀವು ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

## ಅನುಬಂಧ-2

## ದೋಷಾರೋಪಣೆ ವಿವರ

ದಾವಣಗೆರೆ ಜಿಲ್ಲೆ ವಿನೋಭನಗರ 1ನೇ ಕ್ರಾಸ್ 4ನೇ ಮುಖ್ಯ ಶ್ರೀರಾಮ ಸೇನೆಯ ಜಿಲ್ಲಾಧ್ಯಕ್ಷರಾದ ಶ್ರೀ.ಕೆ.ಮಣಿಕಂಠ ಬಿನ್ ಕರುಣಾಕರನ್ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಹಾವೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರರಾಗಿದ್ದ ಶ್ರೀ.ಅರವಿಂದ ಆರ್ ಕುಲಕರ್ಣಿ [ಪ್ರಸ್ತುತ ನಿವೃತ್ತ] ರವರುಗಳ ವಿರುದ್ಧ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

**ದೂರಿನ ಸಂಕ್ಷಿಪ್ತ ವಿವರಣೆ:-** ಆಸನೌ ರವರು ಸರ್ಕಾರಿ ನೌಕರರಾಗಿದ್ದು, ಹಲವಾರು ಲೋಪ ದೋಷಗಳನ್ನು ಎಸಗಿ ಸರ್ಕಾರಕ್ಕೆ ವಂಚನೆ ಮಾಡಿ, ಸರ್ಕಾರದ ಅನುದಾನವನ್ನು

ದುರುಪಯೋಗ ಪಡಿಸಿಕೊಂಡು ಅಕ್ರಮ ಆಸ್ತಿಯನ್ನು ಹೊಂದಿ ತನ್ನ ಪತ್ನಿ, ಮಕ್ಕಳು ಮತ್ತು ತನ್ನ ಪತ್ನಿಯ ಸಂಬಂಧಿಗಳ ಹೆಸರಿಗೆ ಅಕ್ರಮ ಆಸ್ತಿಗಳನ್ನು ಮಾಡಿರುವುದಾಗಿ ಹೇಳಿದ್ದಾರೆ.

ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಆರಕ್ಷಕ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾವೇರಿ (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರಿಗೆ ಕೇಳಲಾಗಿ, ಸದರಿಯವರು ತಮ್ಮ ತನಿಖಾ ವರದಿಯಲ್ಲಿ –

ಆಸನೌ ರವರು ದಿನಾಂಕ:01/01/1983ರಂದು ಸಹಾಯಕ ಅಭಿಯಂತರರಾಗಿ ಸರ್ಕಾರಿ ಸೇವೆಗೆ ಸೇರ್ಪಡೆಗೊಂಡು ಸದರಿಯವರು 1983 ರಿಂದ 1997ರವರೆಗೆ ಕೃಷ್ಣ ಮೇಲ್ದಂಡೆ ಯೋಜನೆ, ಬೀಮರಾಯನ ಗುಡಿ, ಗುಲ್ಬರ್ಗ, 1997 ರಿಂದ 2004ರವರೆಗೆ ಲೋಕೋಪಯೋಗಿ ಇಲಾಖೆ, ಯಲ್ಲಾಪುರ ಮತ್ತು 2004 ರಿಂದ 2006ರವರೆಗೆ ರಾಷ್ಟ್ರೀಯ ಹೆದ್ದಾರಿ, ಹುಬ್ಬಳ್ಳಿಯಲ್ಲಿ ಸಹಾಯಕ ಅಭಿಯಂತರರಾಗಿ, 2006 ರಿಂದ 2016ರವರೆಗೆ ಶಿಗ್ಗಾಂವ, ಕುಂದಗೋಳ ಮತ್ತು ಧಾರವಾಡದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಸೇವೆ ಸಲ್ಲಿಸಿದ್ದು, 2016 ರಿಂದ ದಿನಾಂಕ:31/05/2017 ರವರೆಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಲ್ಲಿ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿ ವಯೋ ನಿವೃತ್ತಿಗೊಂಡಿದ್ದಾರೆ. ಅವರಿಗೆ ಪಿತ್ರಾರ್ಜಿತವಾಗಿ ಅಡೂರು ಗ್ರಾಮದ ಸರ್ವೆ ನಂ.154/2 ಮತ್ತು 28ರಲ್ಲಿ ಕ್ರಮವಾಗಿ, 6.18 ಎಕರೆ ಮತ್ತು 7 ಎಕರೆ ಸ್ವತ್ತುಗಳು ಪಿತ್ರಾರ್ಜಿತವಾಗಿ ಬಂದಿವೆ. ಹುಬ್ಬಳ್ಳಿಯ ಗೋಕುಲ ರಸ್ತೆ ಅಶೋಕವನ ಬಡಾವಣೆಯ ಪ್ಲಾಟ್ ನಂ.33 (1973 ಚದರಡಿ) ಅಳತೆಯ ನಿವೇಶನ ಮತ್ತು ಅದರಲ್ಲಿ 2 ಅಂತಸ್ತಿನ ಮನೆ ಮತ್ತು ಹುಬ್ಬಳ್ಳಿಯ ಏರ್‌ಪೋರ್ಟ್ ರಸ್ತೆಯಲ್ಲಿ ಅವರ ಪತ್ನಿ ಶ್ರೀಮತಿ.ಗೀತಾ ಕುಲಕರ್ಣಿ ರವರ ಹೆಸರಿನಲ್ಲಿ 33ಥ50 ಅಳತೆಯ ವಿಸ್ತೀರ್ಣದ ನಿವೇಶನವಿದೆ. ಅಲ್ಲದೇ, ಕೆಎ 03 ಎಂಡಿ 6291 ಒಂದು ಕಾರ್ ಆಸನೌ ರವರ ಹೆಸರಿನಲ್ಲಿ ಮತ್ತು ಕೆಎ 25 ಇಎ 0333 ದ್ವಿಚಕ್ರ ವಾಹನ ಆಸನೌ ರವರ ಅಣ್ಣನ ಮಗ ಶ್ರೀ.ಪ್ರಸನ್ನ ಆರ್ ಕುಲಕರ್ಣಿ ರವರ ಹೆಸರಿನಲ್ಲಿದೆ. ಗೋಕುಲ ರಸ್ತೆಯಲ್ಲಿರುವ ನಿವೇಶನ ಮತ್ತು ಅದರಲ್ಲಿ ಕಟ್ಟಿದ ಆರ್‌ಸಿಸಿ ಮನೆಯನ್ನು ಆಸನೌ ರವರು ದಿ:01/12/2000ರಂದು ರೂ.7,20,000/-ಕ್ಕೆ ಖರೀದಿಸಿದ್ದು, ರೂ.84,500/- ನೋಂದಣಿ, ಮುದ್ರಾಂಕ ಮತ್ತು ಇತರೆ ಶುಲ್ಕವಾಗಿ ಆ ಸಮಯದಲ್ಲಿ ಸಂದಾಯ ಮಾಡಿದ್ದಾರೆ. ಆ

ಜಾಗದಲ್ಲಿ 1 ಮತ್ತು 2ನೇ ಮಹಡಿ ನಿರ್ಮಿಸಲು ಅವರು ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಹುಬ್ಬಳ್ಳಿ ರವರಿಂದ ರೂ.10,00,000/- ಗೃಹ ಸಾಲವನ್ನು ದಿನಾಂಕ:10/07/15ರಲ್ಲಿ ಪಡೆದಿದ್ದು, ಸದ್ಯ ರೂ.10,17,309/- ಗೃಹ ಸಾಲ ಕಟ್ಟಲು ಬಾಕಿ ಇದೆ. ಹುಬ್ಬಳ್ಳಿಯ ಏರ್‌ಪೋರ್ಟ್ ರಸ್ತೆಯಲ್ಲಿರುವ ನಿವೇಶನವನ್ನು 2010ನೇ ಇಸವಿಯಲ್ಲಿ ಆಸನೌ ರವರ ಪತ್ನಿಯ ಹೆಸರಿನಲ್ಲಿ ರೂ.11,50,000/-ಗಳಿಗೆ ಖರೀದಿಸಿದೆ. ಮೇಲೆ ಹೇಳಿದ ಸ್ಥಿರ ಮತ್ತು ಚರ ಸ್ವತ್ತುಗಳನ್ನು ಹೊರತುಪಡಿಸಿ, ಆಸನೌ ರವರ ಮತ್ತು ಅವರ ಕುಟುಂಬ ಹಾಗೂ ಮಿತ್ರರ ಹೆಸರಿನಲ್ಲಿ ಆಸ್ತಿಗಳಿರುವ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಾಗಿಲ್ಲ. ಮೇಲೆ ಹೇಳಿದ ಕಾರನ್ನು ಖರೀದಿಸಲು ಮೇಲಾಧಿಕಾರಿಗಳಿಂದ ಅನುಮತಿಯನ್ನು ಪಡೆದ ಬಗ್ಗೆ ದಾಖಲೆಗಳು ಲಭ್ಯವಿಲ್ಲ. ಆ ಕಾರಣ, ಆಸನೌ ರವರ ವಿರುದ್ಧ ಮಾಡಿರುವ ಆಪಾಧನೆಗಳಿಗೆ ದಾಖಲೆಗಳು ಮತ್ತು ಪುರಾವೆಗಳು ವಿಚಾರಣಾ ಕಾಲಕ್ಕೆ ದೊರೆತಿಲ್ಲವೆಂದು ಹೇಳಿದ್ದಾರೆ.

ತನಿಖಾ ವರದಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

ತನಿಖಾ ವರದಿಗೆ ಆಸನೌ ರವರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಆಸನೌ ರವರು ತಮ್ಮ ಯಾವುದೇ ಆಕ್ಷೇಪಣೆಯಿಲ್ಲ ಹಾಗೂ ತಮ್ಮಿಂದ ಯಾವುದೇ ಅಕ್ರಮವಾಗಿಲ್ಲವೆಂದು ಹೇಳಿದ್ದಾರೆ.

ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಕಂಡು ಬರುವ ಅಂಶಗಳೇನೆಂದರೆ,

ಆಸನೌ ರವರು ದಿನಾಂಕ:01/01/1983ರಂದು ಸಹಾಯಕ ಅಭಿಯಂತರರಾಗಿ ಸರ್ಕಾರಿ ಸೇವೆಗೆ ಸೇರ್ಪಡೆಗೊಂಡಿದ್ದಾರೆ. ಸದರಿಯವರು ಹಲವಾರು ಲೋಪದೋಷಗಳನ್ನು ಎಸಗಿ ಸರ್ಕಾರಕ್ಕೆ ವಂಚನೆ ಮಾಡಿ, ಪತ್ನಿ, ಮಕ್ಕಳು ಮತ್ತು ಸಂಬಂಧಿಗಳ ಹೆಸರಿನಲ್ಲಿ ಅಕ್ರಮ ಆಸ್ತಿಗಳನ್ನು ಮಾಡಿದ್ದಾರೆ. 2016-17ನೇ ಸಾಲಿನ ಆರ್‌ಟಿಸಿ ಅನ್ವಯ ಅಸನೌ ರವರ ಹೆಸರಿನಲ್ಲಿ ಪಿತ್ರಾರ್ಜಿತವಾಗಿ ಹಾನಗಲ್ ತಾಲ್ಲೂಕ್ ಅಕ್ಕಿ ಆಲೂರು ಹೋಬಳಿ ಅಡೂರು ಗ್ರಾಮದ ಸರ್ವೆ ನಂ.154/2 ಮತ್ತು 28/1ರಲ್ಲಿ ಕ್ರಮವಾಗಿ, 6.15 ಎಕರೆ ಮತ್ತು 7 ಎಕರೆ ಕೃಷಿ ಭೂಮಿಗಳಿದ್ದು,

ಅವರೆಡೂ ಅವರಿಗೆ ಪಿತ್ರಾರ್ಜಿತವಾಗಿ ಬಂದಿರುವುದು ಕಂಡು ಬಂದಿದೆ. ಸದರಿ ಸ್ವತ್ತುಗಳು ಪಿತ್ರಾರ್ಜಿತವಾಗಿ ತಮಗೆ ಬಂದಿವೆಯೆಂದು ಆಸನೌ ರವರು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿದ ಆಸ್ತಿ ಧಾಯಿತ್ವ ಪಟ್ಟಿಯಲ್ಲಿ ಘೋಷಿಸಿದ್ದಾರೆ;

ಹುಬ್ಬಳ್ಳಿಯ ಗೋಕುಲ ರಸ್ತೆ ಅಶೋಕವನ ಬಡಾವಣೆಯ ಪ್ಲಾಟ್ ನಂ.33 (1973 ಚದರಡಿ) ಅಳತೆಯ ನಿವೇಶನ ಮತ್ತು ಅದರಲ್ಲಿ 2 ಅಂತಸ್ತಿನ ಮನೆ ಆಸನೌ ರವರ ಹೆಸರಿನಲ್ಲಿರುವುದಾಗಿ ತನಿಖಾ ವರದಿಯಲ್ಲಿ ಕಂಡು ಬಂದಿದೆ, ಸದರಿ ಸ್ವತ್ತನ್ನು ಒಟ್ಟು ರೂ.7,20,000/–ಗಳಿಗೆ ಖರೀದಿಸಲು ತಮ್ಮ ಮೇಲಾಧಿಕಾರಿಗಳ ಅನುಮತಿ ಕೋರಿದ್ದು, ಸ್ವತ್ತನ್ನು ಖರೀದಿಸಲು ದಿನಾಂಕ:01/12/01ರಂದು ಆಸನೌ ರವರಿಗೆ ಅನುಮತಿಸಿದ್ದಾರೆ. ವೇತನ ಉಳಿತಾಯದಿಂದ ರೂ.1,70,000/–, ಕೃಷಿ ಮೂಲದಿಂದ ರೂ.50,000/– ಮತ್ತು ಹೆಚ್‌ಡಿಎಫ್‌ಸಿ ಬ್ಯಾಂಕ್‌ನಿಂದ ರೂ.5,00,000/– ಸಾಲ ಎಂದು ಹಣದ ಮೂಲವನ್ನು ಆಸನೌ ರವರು ತಮ್ಮ ಇಲಾಖಾ ಮೇಲಾಧಿಕಾರಿಗಳಿಗೆ ತೋರಿಸಿದ್ದಾರೆ. ದಿ:01/12/01ರ ಆದೇಶ ಮತ್ತು ದಿ:01/12/2000ರ ಕ್ರಯ ಪತ್ರದ ಪ್ರತಿಯಿರುತ್ತದೆ. ಸ್ಥಿರ ಸ್ವತ್ತನ್ನು ದಿ:01/12/2000 ದಂದು ರೂ.7,20,000/–ಗಳಿಗೆ ಖರೀದಿಸಿದ ನಂತರ ಆಸನೌ ರವರು ದಿ:01/12/01ರಂತೆ ಇಲಾಖಾ ಅನುಮತಿಯನ್ನು ಪಡೆದಿರುವುದು ಕಂಡು ಬಂದಿದೆ. ಕೆಸಿಎಸ್ (ನಡತೆ) ನಿಯಮಗಳು, 1956ರ ನಿಯಮ 23ರ ಪ್ರಕಾರ ಯಾವುದೇ ಒಬ್ಬ ಸರ್ಕಾರಿ ನೌಕರ ಸ್ಥಿರ ಸ್ವತ್ತನ್ನು ಖರೀದಿಸುವ ಮುನ್ನ ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಪಡೆಯಬೇಕಿದೆ. ಆಸನೌ ರವರು ಆ ರೀತಿಯ ಪೂರ್ವಾನುಮತಿಯನ್ನು ಪಡೆಯದೇ ಸ್ಥಿರ ಸ್ವತ್ತನ್ನು ರೂ.7,20,000/–ಗಳಿಗೆ ಖರೀದಿಸಿ ನಿಯಮ 23(2)ರ ಉಲ್ಲಂಘನೆ ಮಾಡಿ ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಮುಂದುವರೆದು, ದಿ:10/07/15ರಂದು ಆಸನೌ ರವರು ಎಸ್‌ಬಿಹೆಚ್, ಹುಬ್ಬಳ್ಳಿ ಯಿಂದ ರೂ.10,00,000/– ಗೃಹ ಸಾಲವನ್ನು ಪಡೆಯಲು ಪೂರ್ವಾನುಮತಿಯನ್ನು ಪಡೆದ ಬಗ್ಗೆ ದಾಖಲೆಗಳಿಲ್ಲ. ಆದ್ದರಿಂದ, ಅಸನೌ ರವರು ಕೆಸಿಎಸ್ (ನಡತೆ) ನಿಯಮಗಳು, 1956ರ ನಿಯಮ 21(4) ಅನ್ನು ಉಲ್ಲಂಘಿಸಿದ್ದಾರೆ;

ಹುಬ್ಬಳ್ಳಿಯ ಏರ್‌ಪೋರ್ಟ್ ರಸ್ತೆಯಲ್ಲಿ ಆಸನೌ ರವರ ಪತ್ನಿ ಶ್ರೀಮತಿ.ಗೀತಾ ಕುಲಕರ್ಣಿ ರವರ ಹೆಸರಿನಲ್ಲಿ 33ಥ50 ಅಳತೆಯ ವಿಸ್ತೀರ್ಣದ ನಿವೇಶನವಿದೆ. ಪರಿಹಾರ ಧನ

+ ಸಂಬಳದ ಉಳಿತಾಯದಿಂದ ಸದರಿ ಸ್ವತ್ತನ್ನು ಅರ್ಜಿಸಿದೆಯೆಂದು ಆಸನೌ ರವರು ಆಸ್ತಿ ಧಾಯಿತ್ವ ಪಟ್ಟಿಯಲ್ಲಿ ಘೋಷಿಸಿಕೊಂಡಿದ್ದು, ತನಿಖಾ ವರದಿಯ ಪ್ರಕಾರ ಆಸನೌ ರವರ ಪತ್ನಿ ಗೃಹಿಣಿಯಾಗಿದ್ದಾರೆ. ಆದಕಾರಣ, ಸ್ವತ್ತನ್ನು ಆಸನೌ ರವರ ವೇತನ ಉಳಿತಾಯದ ಹಣದಿಂದ ಮತ್ತು ಆಸನೌ ರವರು ಹೇಳಿದಂತೆ ಪರಿಹಾರ ಧನದಿಂದ ಖರೀದಿಸಿದೆಯೆಂದು ಹೇಳಬಹುದಾಗಿದೆ. ತಮ್ಮ ಪತ್ನಿಯ ಹೆಸರಿನಲ್ಲಿ ರೂ.11,50,000/- ಗಳಿಗೆ ನಿವೇಶನವನ್ನು ಖರೀದಿಸುವ ಬಗ್ಗೆ ಆಸನೌ ರವರು ತಮ್ಮ ಇಲಾಖಾ ಮೇಲಾಧಿಕಾರಿಗಳಿಂದ ಅಥವಾ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ಬಗ್ಗೆ ದಾಖಲೆಗಳಿಲ್ಲ (ದಿ:21/08/10ರ ಖರೀದಿ ಕರಾರು ಪತ್ರದ ಪ್ರತಿಯಿರುತ್ತದೆ). ಆಸನೌ ರವರು ಪೂರ್ವಾನುಮತಿಯನ್ನು ಪಡೆಯದೇ ಸ್ಥಿರ ಸ್ವತ್ತನ್ನು ರೂ.11,50,000/-ಗಳಿಗೆ ಖರೀದಿಸಿ ನಿಯಮ 23(2)ರ ಉಲ್ಲಂಘನೆ ಮಾಡಿ ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

ಅಲ್ಲದೇ, ಹೊಂಡಾ ಕಂಪನಿಯ ಕೆಎ 03 ಎಂಡಿ 6291 ನೋಂದಣಿ ಸಂಖ್ಯೆಯ ಕಾರ್ ಆಸನೌರವರ ಹೆಸರಿನಲ್ಲಿ ದಿ:02/04/05ರಂದು ನೋಂದಣಿಯಾಗಿದ್ದು, ಆ ಬಗ್ಗೆ ಬಿ-ವಹಿಯ ಪ್ರತಿಯಲ್ಲಿ ಕಂಡು ಬಂದಿದೆ. ಸದರಿ ಕಾರ್ ಆರ್‌ಟಿಓ, ಬೆಂಗಳೂರು ಪೂರ್ವ ರವರ ಕಛೇರಿಯಲ್ಲಿ ನೋಂದಣಿಯಾಗಿದೆ. ಸದರಿ ಕಾರನ್ನು ಜೀವ ವಿಮಾ ಫಲಿತ ಮೊತ್ತ ಮತ್ತು ಬ್ಯಾಂಕ್ ಸಾಲದಿಂದ ಖರೀದಿಸಿದೆಯೆಂದು ಆಸನೌ ರವರು ಆಸ್ತಿ ಧಾಯಿತ್ವ ಪತ್ರದಲ್ಲಿ ಘೋಷಿಸಿದ್ದಾರೆ. ಆದರೆ, ಬ್ಯಾಂಕ್ ಸಾಲ ಎಷ್ಟು? ಮತ್ತು ಜೀವ ವಿಮಾ ಫಲಿತ ಮೊತ್ತ ಎಷ್ಟೆಂದು ಎಲ್ಲಿಯೂ ಘೋಷಿಸಿಲ್ಲ. ವಾಹನ ಖರೀದಿಯ ಬಗ್ಗೆ ಆಸನೌ ರವರು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದ ಬಗ್ಗೆ ದಾಖಲೆಗಳಿಲ್ಲ;

ಕೆಎ 25 ಇಎ 0333 ದ್ವಿಚಕ್ರ ವಾಹನ ಆಸನೌ ರವರ ಅಣ್ಣನ ಮಗ ಶ್ರೀ.ಪ್ರಸನ್ನ ಆರ್ ಕುಲಕರ್ಣಿ ರವರ ಹೆಸರಿನಲ್ಲಿ ನೋಂದಣಿಯಾಗಿದ್ದು, ಸದರಿ ದ್ವಿಚಕ್ರ ವಾಹನವನ್ನು ದಿ:07/06/07ರಂದು ಆಸನೌ ರವರು ತಮ್ಮ ಅಣ್ಣನ ಮಗನ ಹೆಸರಿನಲ್ಲಿ ರೂ.33,270/- ಗಳಿಗೆ ಖರೀದಿಸಿರುವುದು ತನಿಖಾಧಿಕಾರಿಗಳ ವರದಿಯಲ್ಲಿ ಕಂಡು ಬಂದಿದೆ. ಸದರಿ ವಾಹನದ ಬಿ-ವಹಿ ನಕಲಿನಲ್ಲಿ ಕಂಡು ಬರುವ ಪ್ರಕಾರ ಶ್ರೀ.ಪ್ರಸನ್ನ ಆರ್ ಕುಲಕರ್ಣಿ, ಬಿನ್ ರವೀಂದ್ರ, ಗೋಕುಲ ರಸ್ತೆ, ಹುಬ್ಬಳ್ಳಿ ರವರ ಹೆಸರಿನಲ್ಲಿ ನೋಂದಣಿಯಾಗಿದ್ದು, ಹುಬ್ಬಳ್ಳಿ ವಿದ್ಯಾನಗರ

ಉಮಾರಾಣಿ ಆಟೋಸ್ ರವರಿಂದ ಸದರಿ ವಾಹನವನ್ನು ಖರೀದಿಸಿದೆಯೆಂದು ದಿ:07/06/07ರ ಟ್ಯಾಕ್ಸ್ ಬಿಲ್ಲಿನಲ್ಲಿ ಕಂಡು ಬಂದಿದೆ. ಸದರಿ ರಸೀದಿ ಶ್ರೀ.ಪ್ರಸನ್ನ ಆರ್ ಕುಲಕರ್ಣಿ ರವರ ಹೆಸರಿನಲ್ಲಿ ನೀಡಿದೆ. ಆಸನೌ ರವರೇ ಆ ಹಣವನ್ನು ಶ್ರೀ.ಪ್ರಸನ್ನ ಆರ್ ಕುಲಕರ್ಣಿ ರವರಿಗೆ ಕೊಟ್ಟಿರುವ ಬಗ್ಗೆ ದಾಖಲೆಗಳಿಲ್ಲ.

ಸ್ಥಿರ ಸ್ವತ್ತುಗಳು ಮತ್ತು ಕಾರ್ ಖರೀದಿ ಹಾಗೂ ಸಾಲ ಪಡೆಯುವ ಬಗ್ಗೆ ಆಸನೌ ರವರು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೇ, "ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳ ಉಲ್ಲಂಘನೆ ಮಾಡಿ ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ.

ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ವರದಿ ಮತ್ತು ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಆಸನೌ ರವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ \ ಸಮಂಜಸ \ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಆಸನೌ ರವರು ಸರ್ಕಾರಿ \ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ \ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

ಆಸನೌ ರವರು ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮ 3(i) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದು, ಆಸನೌ ರವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ಹಾಗೂ ಆಸನೌ ರವರು ದಿ:

31/5/2017 ರಂದು ನಿವೃತ್ತಿಹೊಂದಿರುವುದರಿಂದ ಕೆ.ಸಿ.ಎಸ್.ನಿಯಮ 214(2)(ಬಿ) ರಡಿಯಲ್ಲಿ ಆಸನಾ ರವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಗೌರವಾನ್ವಿತ ಉಪಲೋಕಾಯುಕ್ತರವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇರೆಗೆ ಸರ್ಕಾರವು ಮೇಲೆ ಉಲ್ಲೇಖಿಸಿದ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿರುತ್ತದೆ. ಅದರಂತೆ, ಗೌರವಾನ್ವಿತ ಉಪಲೋಕಾಯುಕ್ತರವರು, ಅಪರ ನಿಬಂಧಕರು, ವಿಚಾರಣೆಗಳು-9 ರವರಿಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಲು ಸೂಚಿಸಿರುತ್ತಾರೆ.

5. As per the above referred Government orders at reference No 1 above, the Government accorded permission to the Hon'ble Upalokayukta to initiate enquiry against DGO and as per the said order, Additional Registrar of Enquiries-9 was nominated as the Enquiry Officer.

6. On appearance, on 24-9-2019, plea/first oral statement was recorded and DGO did not plead guilty. DGO did not file written statement.

7. On behalf of the disciplinary authority, the Investigating officer Sri. Nagaraj, was examined as PW-1, Exs.P1 to P20 were marked.

8. Second Oral statement of DGO was recorded on 10.7.2023. DGO has not examined any of the witness and has not marked any of the document. Hence questionnaire under Rule 11(18) KCS (CCA) Rules 1957 was recorded.

9. Heard the submissions of both the sides.

10. Hence, the point for consideration is:

(1) Whether the disciplinary authority proves the charges framed against DGO?

11. The finding is partly affirmative for the following: 24/11

## REASONS

12. PW-1, the Deputy Superintendent of Police, Karnataka Lokayukta/ Investigating officer; in his evidence has mainly deposed that he has collected the information with regard to the properties of the DGO and the DGO, on 1.12.2000, purchased site No. 33, measuring 1973 Sq. ft, consisting of a house with two floors, situating at Ashoka Vana layout, Gokul Road, Hubli; for Rs. 7,20,000/-. But he subsequently obtained the permission for the same, on 1.12.2001. Without obtaining previous permission, he purchased the said property. PW-1 has also deposed that without obtaining prior permission, the DGO obtained loan of Rs. 10,00,000/-, on 10.7.2015, from SBH, Hubli branch. Even without prior permission he purchased a site, measuring 33X50 ft, situating at Airport road, in Hubli; in the name of his wife, namely – Geetha Kulakarni. He further deposes that without prior permission and without disclosing the source of income, he purchased Honda car, bearing registration No. KA 03 MD 6291, on 2.4.2005.

13. Through him the documents, Ex.P-1 to Ex.P-20 are marked. Ex.P-1 is the Investigation report. Ex.P-2 is Form No.1 filed by the complainant. Ex.P-3 is the form No. 2 filed by the complainant. Ex.P-4 is the detailed complaint filed by the complainant. Ex.P-5 is the registered sale deed, dtd: 1.12.2000, executed infavour of DGO, in respect of site No. 33, measuring 1973 Sq. ft, situating at Ashoka Vana layout, Unakal village, for Rs. 7,20,000/-. Ex.P-6 are the account extracts of SBI, relating the DGO. Ex.P-7 is the letter, dtd: 10.7.2015, issued from SBH, Hubli to the Sub-Registrar, Hubli; requesting to register equitable Mortgage deed executed by DGO. Ex.P- 8 and 9 are the photographs of the house of the DGO. Ex.P-10 is the copy of un-registered agreement, dtd: 21.8.2010. Ex.P-11 is the copy of

assessment register of the property, situating within the jurisdiction of Adur village Panchayath. Ex.P-12 is the copy of Mutation Register relating the property, situating at Adur village. Ex.P-13 is the covering letter, dtd: 16.8.2017, issued by RTO, Dharwad to Deputy Superintendent of Police, Karnataka Lokayukta. Ex.P-14 is the copy of B-extract, pertaining to motorcycle, bearing registration No. KA 25 EA 0333. Ex.P-15 is the copy of Tax Invoice issued in the name of Prasanna Kulkarni in respect of motorcycle. Ex.P-16 is the copy of B-extract, pertaining to the car, bearing registration No. KA 03 MD 6291. Ex.P-17 is the copy of Income Tax proposal of DGO . Ex.P-18 is the statement of Income Tax of DGO for the period from 4.8.2016 to May,2017. Ex.P-19 and Ex.P-20 are the copies of pay particulars of DGO.

14. With regard to purchase of site No. 33, measuring 1973 Sq. ft, situating at Ashoka Vana layout in Gokul road, Hubli, for Rs. 7,20,000/-. PW-1 has deposed to that effect and Ex.P-1, investigation report; also shows the same. Ex.P-5, registered sale deed, dtd: 1.12.2000, shows that the said property was purchased for Rs. 7,20,000/-, by DGO. Further it is clearly suggested to PW-1 on behalf of the DGO that for purchasing the said site the DGO had obtained permission on 1.12.2001. Even in the questionnaire he has stated that for purchasing the said property permission was granted. When the date of purchase of said property is 1.12.2000 and the permission was granted on 1.12.2001, it is clear that the said property was purchased by the DGO without prior permission, or sanction, or knowledge of competent authority. Hence the DGO has violated the Rule 23 of KCS (Conduct) Rules.

15. With regard to obtaining housing loan of Rs.10,00,000/- from SBH, Hubli; by the DGO, on 10.7.2015; PW-1 has deposed to that effect and Ex.P-1, the investigation report; also shows the same. It is specifically

suggested to PW-1 on behalf of the DGO that the DGO had obtained prior permission to obtain the said loan, itself shows that the DGO had obtained the said loan. Further Ex.P-7, letter issued by SBH, Hubli, dated: 10.7.2015, to Sub-Registrar Hubli; stating DGO had obtained housing loan and requested to register equitable mortgage deed and (subsequently SBH was merged with SBI) Ex.P-6, bank loan accounts of DGO, show debit balances throughout. Further to show that he has obtained prior permission no document is produced by the DGO. Hence the DGO has violated the Rule 21 of KCS (Conduct) Rules.

16. With regard to purchasing of a site, measuring 33 X 50 ft., situating near Airport Road, Hubli; by the DGO, in the name of his wife, namely- Geetha Kulkarni, even though PW-1 has deposed to that effect and Ex.P-1 also shows the same; considering Ex.P-10, which is an un-registered agreement, wherein it is clearly recited that the possession would be delivered on the date of sale. Further the said document is not a sale deed. Further PW-1, in his cross examination, has clearly admitted that the said Ex.P-10 was not registered and he has not examined Sri.Srinivas, the person who offered to sell the said property. Since there was no sale deed, executed in favour of the wife of DGO, in respect of said property, it cannot be said that without prior permission the DGO had purchased the said property in the name of his wife.

17. With regard to Honda company car, bearing registration No. KA 03 MD 6291, even though PW-1 has deposed to that effect and Ex.P-1, investigation report, shows the same; on careful perusal of Ex.P-16, B-extract/ RC, pertaining to the said vehicle, in column No. 3, the owner's name is shown as "Manager ING Vysya Bank". Column No. 24 shows that the

previous owner – Nil. Column No. 31, owners serial, is shown as 1. Further PW-1 in his cross examination has clearly admitted that DGO's name is not found in Ex.P-16 and the said car is shown to be owned by Manager ING Vysya Bank. From these aspects it is clear that the said car was not purchased, or owned, by DGO.

18. From all these aspects it is clear that by purchasing a site, by the DGO, as per registered sale deed, dtd: 1.12.2001, without prior permission and obtaining of loan from SBH, on 10.7.2015, amounting to Rs. 10,00,000/-; the DGO has violated the Rules concerned. Hence Point No. 1 is answered accordingly.

19. Point No. 2; In view of the answer to point No. 1 the following

FINDINGS

20. The Disciplinary Authority has proved charges No. 1 and 2 levelled against DGO.

21. The Disciplinary Authority has not proved the charges No. 3 and 4 levelled against DGO.

22. Hence this report is submitted to Hon'ble Upalokayukta -1 for further action.

23. The date of retirement of DGO is 31.5.2017.

24.11.23

(SHUBHAVEER.B)
Additional Registrar Enquiries-9
Karnataka Lokayukta, Bengaluru

List of witnesses examined on behalf of Disciplinary Authority

| | |
|---|---|
| PW-1 | Sri.Nagaraj, S/o Annappa Ambali, Retired Deputy Superintendent of Police, Dharwad. |

List of documents marked on behalf of Disciplinary Authority

| | |
|---|---|
| Ex.P-1 | Investigation report of Deputy Superintendent of Police, Dharwad |
| Ex.P-2 | Form No.1, dtd: 16.11.2016, filed by complainant |
| Ex.P-3 | Form No. 2, dtd: 16.11.2016, filed by complainant |
| Ex.p-4 | Detailed complaint, dtd: 16.11.2016, filed by complainant |
| Ex.P-5 | Registered sale deed |
| Ex.p-6 | Account extracts of SBI relating to DGO |
| Ex.P-7 | Letter, dtd: 10.7.2015, issued by Branch Manager State Bank of Hyderabad, Hubli; to the Sub-Registrar, Hubli |
| Ex.P-8 & 9 | Photographs of the house of DGO. |
| Ex.P-10 | Copy of agreement |
| Ex.P-11 | Copy of assessment register of Adura village Panchayath |
| Ex.P-12 | Copy of Mutation Register |
| Ex.P-13 | Covering letter, dtd: 16.8.2017, issued by RTO to DSP, Karnataka Lokayukta, Haveri. |
| Ex.P-14 | Copy B-extract, pertaining to vehicle No. KA -25 EA - 0333 |
| Ex.p-15 | Copy of Tax Invoice |
| Ex.P-16 | B-extract, pertaining to vehicle No. KA -03 MD 6291 |
| Ex.P-17 | Copy of Income Tax proposal of DGO |
| Ex.P-18 | Statement of Income Tax of DGO for the period from 4.8.2016 to May,2017 |

| | |
|---|---|
| Ex.p-19 | Copy of salary details of DGO |
| Ex.P-20 | Copy of pay particulars of DGO |

List of witnesses examined on behalf of DGO

| |
|---|
| NIL |

List of documents marked on behalf of DGO

| |
|---|
| NIL |

24.11.23

(SHUBHAVEER.B)
Additional Registrar Enquiries-9
Karnataka Lokayukta,
Bengaluru

**ಕರ್ನಾಟಕ ಸರ್ಕಾರ**

**ಕರ್ನಾಟಕ ಲೋಕಾಯುಕ್ತ**

ನಂ:ಉಪಲೋಕ್–1/ಡಿಇ/127/2019/ಎ.ಆರ್.ಇ–09

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು–560001.
ದಿನಾಂಕ: 29ನೇ ನವೆಂಬರ್ 2023.

**–:: ಶಿಫಾರಸ್ಸು ::–**

ವಿಷಯ: ಆಪಾದಿತ ಸರ್ಕಾರಿ ನೌಕರರಾದ ಶ್ರೀ ಅರವಿಂದ ಅರ್ ಕುಲಕರ್ಣಿ ಕಾರ್ಯಪಾಲಕ ಅಭಿಯಂತರರು(ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಡಿವಿಷನ್, ಹಾವೇರಿ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಆದೇಶ ಸಂಖ್ಯೆ: ಲೋಇ 7 ಸೇಇವಿ 2019, ಬೆಂಗಳೂರು, ದಿನಾಂಕ: 23/04/2019.

(2) ಉಪಲೋಕಾಯುಕ್ತ, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂಖ್ಯೆ. ಉಪಲೋಕ್–1/ಡಿಇ/127/2019, ಬೆಂಗಳೂರು, ದಿನಾಂಕ: 13/05/2019.

(3) ಅಪರ ನಿಬಂಧಕರು ವಿಚಾರಣೆಗಳು–09, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 24/11/2023.

*****

ಸರ್ಕಾರದ ಆದೇಶ ದಿನಾಂಕ: 23/04/2019 ರಂತೆ ಶ್ರೀ ಅರವಿಂದ ಅರ್ ಕುಲಕರ್ಣಿ ಕಾರ್ಯಪಾಲಕ ಅಭಿಯಂತರರು(ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಡಿವಿಷನ್, ಹಾವೇರಿ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಅಂದರೆ ಚಿಕ್ಕದಾಗಿ 'ಆ.ಸ.ನೌಕರರು' ಎಂದು ಸಂಭೋದಿಸಲಾಗುವುದು) ರವರ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ: ಉಪಲೋಕ್–1/ಡಿಇ/127/2019, ಬೆಂಗಳೂರು, ದಿನಾಂಕ: 13/05/2019ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು–9 ರವರಿಗೆ ಆ.ಸ.ನೌಕರರ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌಕರರಾದ ಶ್ರೀ ಅರವಿಂದ ಅರ್ ಕುಲಕರ್ಣಿ ಕಾರ್ಯಪಾಲಕ ಅಭಿಯಂತರರು(ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಡಿವಿಷನ್, ಹಾವೇರಿ ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

## ಅನುಬಂಧ–1

### ದೋಷಾರೋಪಣೆ

ಆಸನೌ ಆದ ನೀವು – ಹಾವೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರರಾಗಿ ನಿವೃತ್ತಿ ಹೊಂದಿದ್ದು,

ಹುಬ್ಬಳ್ಳಿಯ ಗೋಕುಲ ರಸ್ತೆ ಅಶೋಕವನ ಬಡಾವಣೆಯ ಪ್ಲಾಟ್ ನಂ.33 (1973 ಚದರಡಿ) ಅಳತೆಯ ನಿವೇಶನ ಮತ್ತು ಅದರಲ್ಲಿ 2 ಅಂತಸ್ತಿನ ಮನೆ ನಿಮ್ಮ ಹೆಸರಿನಲ್ಲಿದ್ದು, ಸದರಿ ಸ್ವತ್ತನ್ನು ಒಟ್ಟು ರೂ.7,20,000/–ಗಳಿಗೆ ಖರೀದಿಸಲು ನಿಮ್ಮ ಮೇಲಾಧಿಕಾರಿಗಳ ಅನುಮತಿ ಕೋರಿದ್ದು, ಸ್ವತ್ತನ್ನು ಖರೀದಿಸಲು ದಿನಾಂಕ:01/12/01ರಂದು ನೀವು ಅನುಮತಿ ಪಡೆದಿರುತ್ತೀರಿ. ವೇತನ ಉಳಿತಾಯದಿಂದ ರೂ.1,70,000/–, ಕೃಷಿ ಮೂಲದಿಂದ ರೂ.50,000/– ಮತ್ತು ಹೆಚ್‌ಡಿಎಫ್‌ಸಿ ಬ್ಯಾಂಕ್‌ನಿಂದ ರೂ.5,00,000/– ಸಾಲ ಎಂದು ಹಣದ ಮೂಲವನ್ನು ನೀವು ನಿಮ್ಮ ಇಲಾಖಾ ಮೇಲಾಧಿಕಾರಿಗಳಿಗೆ ತೋರಿಸಿದ್ದೀರಿ. ದಿ:01/12/01ರ ಆದೇಶ ಮತ್ತು ದಿ:01/12/2000ರ ಕ್ರಯ ಪತ್ರದ ಪ್ರತಿಯಿರುತ್ತದೆ. ಸ್ಥಿರ ಸ್ವತ್ತನ್ನು ದಿ:01/12/2000 ರಂದು ರೂ.7,20,000/–ಗಳಿಗೆ ಖರೀದಿಸಿದ ನಂತರ ನೀವು ದಿ:01/12/01ರಂತೆ ಇಲಾಖಾ ಅನುಮತಿಯನ್ನು ಪಡೆದಿರುವುದು ಕಂಡು ಬಂದಿದೆ. ಕೆಸಿಎಸ್ (ನಡತೆ) ನಿಯಮಗಳು, 1956ರ ನಿಯಮ 23ರ ಪ್ರಕಾರ ಯಾವುದೇ ಒಬ್ಬ ಸರ್ಕಾರಿ ನೌಕರ ಸ್ಥಿರ ಸ್ವತ್ತನ್ನು ಖರೀದಿಸುವ ಮುನ್ನ ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಪಡೆಯಬೇಕಿದೆ. ನೀವು ಆ ರೀತಿಯ ಪೂರ್ವಾನುಮತಿಯನ್ನು ಪಡೆಯದೇ ಸ್ಥಿರ ಸ್ವತ್ತನ್ನು ರೂ.7,20,000/–ಗಳಿಗೆ ಖರೀದಿಸಿ ಕೆಸಿಎಸ್ (ನಡತೆ) ನಿಯಮ 23(2)ರ ಉಲ್ಲಂಘನೆ ಮಾಡಿ ದುರ್ನಡತೆ ತೋರಿಸಿರುತ್ತೀರಿ.

ನೀವು ದಿ:10/07/15ರಂದು ಎಸ್‌ಬಿಹೆಚ್, ಹುಬ್ಬಳ್ಳಿಯಿಂದ ರೂ.10,00,000/– ಗೃಹ ಸಾಲವನ್ನು ಪಡೆದಿದ್ದು ಪೂರ್ವಾನುಮತಿಯನ್ನು ಪಡೆದ ಬಗ್ಗೆ ದಾಖಲೆಗಳಿಲ್ಲ. ಆದ್ದರಿಂದ, ಅಸನೌ ರವರು ಕೆಸಿಎಸ್ (ನಡತೆ) ನಿಯಮಗಳು, 1956ರ ನಿಯಮ 23(3)&(4) ಅನ್ನು ಉಲ್ಲಂಘಿಸಿದ್ದೀರಿ;

ಹುಬ್ಬಳ್ಳಿಯ ಏರ್‌ಪೋರ್ಟ್ ರಸ್ತೆಯಲ್ಲಿ ನಿಮ್ಮ ಪತ್ನಿ ಶ್ರೀಮತಿ.ಗೀತಾ ಕುಲಕರ್ಣಿ ರವರ ಹೆಸರಿನಲ್ಲಿ 33x50 ಅಳತೆಯ ವಿಸ್ತೀರ್ಣದ ನಿವೇಶನವಿದೆ. ಪರಿಹಾರ ಧನ + ಸಂಬಳದ ಉಳಿತಾಯದಿಂದ ಸದರಿ ಸ್ವತ್ತನ್ನು ಅರ್ಜಿಸಿದೆಯೆಂದು ನೀವು ಆಸ್ತಿ ಧಾಯಿತ್ವ ಪಟ್ಟಿಯಲ್ಲಿ ಘೋಷಿಸಿಕೊಂಡಿದ್ದು, ನಿಮ್ಮ ಪತ್ನಿ ಗೃಹಿಣಿಯಾಗಿದ್ದು, ಆದಕಾರಣ, ಸ್ವತ್ತನ್ನು ನೀವು ವೇತನ ಉಳಿತಾಯದ ಹಣದಿಂದ ಮತ್ತು ನೀವು ಹೇಳಿದಂತೆ ಪರಿಹಾರ ಧನದಿಂದ ಖರೀದಿಸಿದೆಯೆಂದು ಹೇಳಬಹುದಾಗಿದೆ. ನಿಮ್ಮ ಪತ್ನಿಯ ಹೆಸರಿನಲ್ಲಿ ರೂ.11,50,000/– ಗಳಿಗೆ ನಿವೇಶನವನ್ನು ಖರೀದಿಸುವ ಬಗ್ಗೆ ನೀವು ನಿಮ್ಮ ಇಲಾಖಾ ಮೇಲಾಧಿಕಾರಿಗಳಿಂದ ಅಥವಾ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿರುವುದಿಲ್ಲ. ನೀವು ಪೂರ್ವಾನುಮತಿಯನ್ನು ಪಡೆಯದೆ ಸ್ಥಿರ ಸ್ವತ್ತನ್ನು ರೂ.11,50,000/– ಗಳಿಗೆ ಖರೀದಿಸಿ ಕೆಸಿಎಸ್ (ನಡತೆ) ನಿಯಮ 23(2)ರ ಉಲ್ಲಂಘನೆ ಮಾಡಿ ದುರ್ನಡತೆ ತೋರಿಸಿರುತ್ತೀರಿ;

ಅಲ್ಲದೇ, ಹೊಂಡಾ ಕಂಪನಿಯ ಕೆಎ 03 ಎಂಡಿ 6291 ನೋಂದಣಿ ಸಂಖ್ಯೆಯ ಕಾರ್ ನಿಮ್ಮ ಹೆಸರಿನಲ್ಲಿ ದಿ:02/04/05ರಂದು ನೋಂದಣಿಯಾಗಿದ್ದು, ಆ ಬಗ್ಗೆ ಬಿ–ವಹಿಯ ಪ್ರತಿಯಲ್ಲಿ ಕಂಡು ಬಂದಿದೆ. ಸದರಿ ಕಾರ್ ಆರ್‌ಟಿಒ, ಬೆಂಗಳೂರು ಪೂರ್ವ ರವರ ಕಛೇರಿಯಲ್ಲಿ ನೋಂದಣಿಯಾಗಿದೆ. ಸದರಿ ಕಾರನ್ನು ಜೀವ ವಿಮಾ ಫಲಿತ ಮೊತ್ತ ಮತ್ತು ಬ್ಯಾಂಕ್ ಸಾಲದಿಂದ ಖರೀದಿಸಿದೆಯೆಂದು ನೀವು ಆಸ್ತಿ ಧಾಯಿತ್ವ ಪತ್ರದಲ್ಲಿ ಘೋಷಿಸಿದ್ದು ಆದರೆ, ಬ್ಯಾಂಕ್ ಸಾಲ ಎಷ್ಟು? ಮತ್ತು ಜೀವ ವಿಮಾ ಫಲಿತ ಮೊತ್ತ ಎಷ್ಟೆಂದು ಎಲ್ಲಿಯೂ ಘೋಷಿಸಿಲ್ಲ. ವಾಹನ ಖರೀದಿಯ ಬಗ್ಗೆ ನೀವು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆಯದೆ ಖರೀದಿಸಿ ಕೆಸಿಎಸ್ (ನಡತೆ) ನಿಯಮ 23(3)ರ ಉಲ್ಲಂಘನೆ ಮಾಡಿ ದುರ್ನಡತೆ ತೋರಿಸಿರುತ್ತೀರಿ;

ಆದ್ದರಿಂದ, ನೀವು ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

4. ವಿಚಾರಣಾಧಿಕಾರಿಯಾದ (ಅಪರ ನಿಬಂಧಕರು ವಿಚಾರಣೆಗಳು–9), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆ.ಸ.ನೌಕರರಾದ ಶ್ರೀ ಅರವಿಂದ ಅರ್ ಕುಲಕರ್ಣಿ ಕಾರ್ಯಪಾಲಕ ಅಭಿಯಂತರರು(ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಡಿವಿಷನ್, ಹಾವೇರಿ ರವರ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು 'ಭಾಗಶ: **ಸಫಲವಾಗಿರುತ್ತದೆ**' ಎಂದು ಅಭಿಪ್ರಾಯಿಸಿದ್ದಾರೆ.

5. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಆ.ಸ.ನೌಕರರ ವಿರುದ್ಧ ದೋಷಾರೋಪಣೆಯನ್ನು ರುಜುವಾತುಪಡಿಸಲು ಒಬ್ಬರು ಸಾಕ್ಷಿಯನ್ನು ಅಂದರೆ ಪಿ.ಡಬ್ಲ್ಯೂ–1 ರವರನ್ನು ವಿಚಾರಣೆಗೆ ಒಳಪಡಿಸಿ ಹಾಗೂ ನಿಶಾನೆ ಪಿ–1 ರಿಂದ ಪಿ–20 ರಂತೆ ದಾಖಲಾತಿಗಳನ್ನು ಗುರುತಿಸಲಾಗಿದೆ.

6. ಆ.ಸ.ನೌಕರರ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸುವಂತೆ ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

7. ಆ.ಸ.ನೌಕರರ ಪ್ರಥಮ ಮೌಖಿಕ ಹೇಳಿಕೆಯ ಪ್ರಕಾರ ವಿಚಾರಣಾಧಿಕಾರಿಗಳು ಸಲ್ಲಿಸಿರುವ ಮಾಹಿತಿಯಂತೆ, ದಿನಾಂಕ: 31/05/2017 ರಂದು ನಿವೃತ್ತಿ ಹೊಂದಿರುತ್ತಾರೆ.

8. ಆ.ಸ.ನೌಕರರಾದ ಶ್ರೀ ಅರವಿಂದ ಅರ್ ಕುಲಕರ್ಣಿ ಕಾರ್ಯಪಾಲಕ ಅಭಿಯಂತರರು(ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್, ಡಿವಿಷನ್, ಹಾವೇರಿ ರವರ ವಿರುದ್ಧ ಸಾಬೀತಾಗಿರುವ ಆರೋಪದ ಸ್ವರೂಪವನ್ನು ಹಾಗೂ ಸಂದರ್ಭಗಳ ಸಂಪೂರ್ಣತೆಯನ್ನು ಪರಿಗಣಿಸಿ, ಆರೋಪಗಳನ್ನು ರುಜುವಾತುಪಡಿಸುವಲ್ಲಿ 'ಭಾಗಶ: **ಸಫಲವಾಗಿರುತ್ತದೆ**' ಎಂದು ನಿರ್ಣಯಿಸಿದೆ:–

'ಆ.ಸ.ನೌಕರರಾದ ಶ್ರೀ ಅರವಿಂದ ಅರ್ ಕುಲಕರ್ಣಿ ಕಾರ್ಯಪಾಲಕ ಅಭಿಯಂತರರು(ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್, ಡಿವಿಷನ್, ಹಾವೇರಿ ರವರಿಗೆ ಅವರ ಪಿಂಚಣಿಯಿಂದ ಶೇಕಡ 5% ರಷ್ಟನ್ನು ಎರಡು ವರ್ಷ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ'.

9. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

29/11/23

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತ-1,
ಕರ್ನಾಟಕ ರಾಜ್ಯ.